ಕನ್ನಡಪ್ರಭ

ಸೋಮವಾರ
30.11.2009
www. kannadaprabha.com
e-mail : kannadaprabha@gmail.com

ನಿತ್ತಸ್ಪಭ

ದೀಪದಿಂದ ದೀಪ ಹಚ್ಚ

ಸೂರ್ಯನ ಕಾಂತಿಗೆ ಸೂರ್ಯನೇ ಸಾಟಿ

■ ಶ್ರೀಕಾಂತ್ ಭಟ್

ಸಮಾಜ ಸೇವೆ ಹೇಗೆಲ್ಲ ಮಾಡಬಹುದು... ಕೆಲವರು ಕ್ಯಾಮರಾಗೆ ಪೋಸುಕೊಡಲೆಂದೇ ಮತ್ತೆ ಕೆಲವರು ನೈಜವಾಗಿ ಸಾಮಾಜಿಕ ಕಳಕಳಿಯಿಂದ ಸಮಾಜ ಸೇವೆ ಮಾಡುವವರಿದ್ದಾರೆ.

ಹೀಗೆಯೇ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಲು ಹೊರಟವ ರೊಬ್ಬರ ಕಥೆ ಇಲ್ಲಿದೆ.

ಬೆಂಗಳೂರಿನ ನಿವಾಸಿಯೊಬ್ಬರು ಹೊಸ ರೀತಿಯ ಸಮಾಜ ಸೇವೆ ಗಾಗಿ ಹಚ್ಚಿಸಿದ ಕಿಡಿ ಈಗ ವಿಶ್ವವನ್ನು ಮುಟ್ಟುತ್ತಿದೆ. ಇದು ಒಂದು ವ್ಯವಸ್ಥೆಯನ್ನೇ ಬದಲು ಮಾಡಬಹುದಾದಂಥ, ಹಲವು ಸಮಸ್ಯೆಗೆ ಮದ್ದನ್ನೂ ನೀಡಬಲ್ಲ ಇವರ ಕಾಳಜಿ ಈಗ ವಿಶ್ವಮಾನ್ಯ.

ನಮ್ಮ ಮನೆಯ ದೀಪ... ಪಕ್ಕದ ಮನೆಯಲ್ಲಿ ಹಬ್ಬ!

ಅಂಥದ್ದೇನು ಅಂದಿರಾ?, 'ಗೋ ಸೋಲಾರ್' ಇದು ಬೆಂಗಳೂರು ಜೆ.ಪಿ.ನಗರದ ನಿವಾಸಿ ಎಸ್.ಡಿ.ರಘುನಾಥ್ ಅವರ ವಿಶಿಷ್ಟ ಪ್ರಚಾರ.

ತಮ್ಮ ವಾನಪ್ರಸ್ಥಾಶ್ರಮ ಸಮಾಜ ಸೇವೆ ಸಂಸ್ಥೆ ಹಾಗೂ ಪ್ರೋ ಆಕ್ಟಿವ್ ರೆಸಿಜೆಂಟ್ ವೆಲ್‌ಫೇರ್ ಅಸೋಸಿಯೇಷನ್ ಮೂಲಕ ಈ ಹೊಸ ಚಿಂತನೆ ಹರಿಯಬಿಟ್ಟರು. ಅದು ಈಗ ದೊಡ್ಡ ಜ್ವಾಲೆಯಾಗಿ ಹಬ್ಬಿದೆ. ಜಗತ್ತಿಗೆ ಹೊಸ ಬೆಳಕು ತೋರಿಸಲ್ಪಟ್ಟಿದೆ.

ಈ ವ್ಯಕ್ತಿಯೊಂದಿಗೆ ಮಾತುಕತೆ ಕೂತಾಗ ತಮ್ಮ ಚಿಂತನಾ ಲಹರಿ, ಅದು ನಡೆದು ಬಂದ ಬಗೆ, ಹೇಗೆಲ್ಲಾ ಚಟುವಟಿಕೆ ನಡೆಯುತ್ತಿದೆ ಎಂಬುದವನ್ನು ಅವರು ವಿವರಿಸಿದರು. ಅದರ ವಿವರ ಇಲ್ಲಿದೆ.

1. 'ಗೋ ಸೋಲಾರ್' ಅಂದ್ರೆ...

ನಮ್ಮ ಸಂಘಟನೆ ಮೂರ್ನಾಲ್ಕು ವಿಷಯಗಳಲ್ಲಿ ಸಮಾಜ ಸೇವೆಗೆ ಯೋಜನೆ ರೂಪಿಸಿದ್ದೆವು. ಅದರಲ್ಲಿ ಒಂದು ವಿಷಯ 'ಎನರ್ಜಿ'. ಈ ವಿಭಾಗದಲ್ಲಿ ಸೋಲಾರ್ ಅರ್ಥಾತ್ ಸೂರ್ಯನ ಶಕ್ತಿಯನ್ನು ಹೇಗೆ ದೊಡ್ಡಮಟ್ಟದಲ್ಲಿ ಬಳಸಿಕೊಳ್ಳಬೇಕೆಂದು ಜಾಗೃತಿ ಮೂಡಿಸುವ ಯೋಜನೆ. ಇಂದು ಬೇರೆ ಬೇರೆ ಸಂಘಟನೆಗಳು ಬೇರೆ ಬೇರೆ ರೀತಿಯಲ್ಲಿ ಸಮಾಜ ಸೇವೆ ಮಾಡುತ್ತಿವೆ. ಆದರೆ ಸೋಲಾರ್‌ನ್ನು ಮುಖ್ಯವಾಗಿಟ್ಟುಕೊಂಡು ಆರಂಭಿಸಿದ ಜಾಗೃತಿ ಅಭಿಯಾನವೇ ಗೋ ಸೋಲಾರ್.

2. ಯಶಸ್ಸು ಹೇಗೆ?

ವಿಜಯ ದಶಮಿ(ಸೆಪ್ಟೆಂಬರ್ 28, 2009) ಸಮಾಜಕ್ಕೇನಾದರೂ ಒಳ್ಳೆಯದು ಮಾಡಬೇಕೆಂಬ ದೃಷ್ಟಿಯಲ್ಲಿಟ್ಟುಕೊಂಡು ಗೋ ಸೋಲಾರ್ ಆರಂಭಿಸಿದೆವು ಉದ್ದೇಶವಿಷ್ಟೇ, ಸಾಮಾಜಿಕ ಕಾರ್ಯ ಮಾಡುತ್ತಿರುವ ಸಂಘಟನೆಗಳಲ್ಲಿ ಸೋಲಾರನ್ನು ಒಂದು ವಿಷಯವನ್ನಾಗಿ ಬಳಸಿಕೊಳ್ಳುವುದು ಹುರಿದುಂಬಿಸುವುದು. ನಾವು ಆರಂಭಿಕವಾಗಿ ಯಶಸ್ಸು ಕಂಡಿದ್ದೇವೆ. ನಾವು ಹೊತ್ತಿಸಿದ ಒಂದು ಸಣ್ಣ ಕಿಡಿ ಈಗ ದೊಡ್ಡ ಜ್ವಾಲೆಯಾಗಿದೆ. 60 ದಿನಗಳಲ್ಲಿ 4–5 ಲಕ್ಷ ಸೋಲಾರ್ ಉಪಕರಣಗಳು ಬಡವರ ಮನೆ ಸೇರಿದೆ.

3. ಎಲ್ಲೆಲ್ಲಾಗಿದೆ ಚಟುವಟಿಕೆ?

'ಗೋ ಸೋಲಾರ್' ಆರಂಭಿಸಿದ್ದು ಬೆಂಗಳೂರಲ್ಲಾದರೂ ಅದು ವಿಸ್ತರಣೆಯಾಗಿದ್ದು ವಿದೇಶದಲ್ಲಿ. ದೊಡ್ಡ ಕ್ರಾಂತಿಯಾಗಿರುವುದು ಅಮೆರಿಕಾ ಮತ್ತು ಆಫ್ರಿಕಾದಲ್ಲಿ ಖಂಡದಲ್ಲಿ. ಕಳೆದ 60 ದಿನಗಳಲ್ಲಿ 4–5 ಲಕ್ಷ ಸೋಲಾರ್ ಪರಿಕರಗಳು ವಿತರಣೆಯಾಗಿವೆ. ರೋಟರಿ, ಲಯನ್ಸ್ ಸೋಲಾರ್ ಪರಿಕರಗಳ ಮೇಲೆ ಗಮನ ಕೇಂದ್ರೀಕರಿಸಿ ತನ್ನ ಚಟುವಟಿಕೆಯನ್ನು ವ್ಯಾಪಕವಾಗಿ ವಿಸ್ತರಿಸಿವೆಯಂತೆ.

4. ಸೋಲಾರ್ ಸಮಾಜ ಸೇವೆ ಹೇಗೆ?

ಸಮಾಜ ಸೇವೆ ಗುರಿಯಾಗಿಟ್ಟುಕೊಂಡವರು, ಬಡವರು ಆರ್ಥಿಕವಾಗಿ ಹಿಂದುಳಿದವರಿಗೆ ಏನಾದರೂ ನೀಡಬೇಕೆಂದುಕೊಂಡವರು ಆದ್ಯತೆ ಮೇಲೆ ಸೋಲಾರ್ ಪರಿಕರಗಳನ್ನೇ ಒದಗಿಸುವುದು. ಉದಾಹರಣೆಗೆ ಸೋಲಾರ್ ಲೈಟ್, ಸೋಲಾರ್ ಕುಕ್ಕರ್ ಇತ್ಯಾದಿ. ದೊಡ್ಡ ಮಟ್ಟದಲ್ಲಿ ಮಾಡಬಹುದೆಂದರೆ ಒಂದು ಸ್ಲಂನಲ್ಲಿ ಸೋಲಾರ್ ಕಮ್ಯುನಿಟಿ ಕುಕ್ಕರ್ ಹಾಕಿಸುವುದು. ಇದು ಇಡೀ ಒಂದು ಪ್ರದೇಶದ ವ್ಯವಸ್ಥೆ ಅಡುಗೆ ತಯಾರಿಕೆ, ನೀರು ಕಾಯಿಸಲು ಇತ್ಯಾದಿ ಕೆಲಸಕ್ಕೆ ಉಪಯೋಗಕ್ಕೆ ಬರುತ್ತದೆ. ಸಮಾಜ ಸೇವಕ ಈ ರೀತಿ ದಾನ ಮಾಡಿದಾಗ ಸೂರ್ಯನ ಬೆಳಕು ಪಡೆದುಕೊಂಡು ಸಮಾಜಕ್ಕೆ ಹೊರೆಯಾಗದಂತೆ ತಮ್ಮ ಚಟುವಟಿಕೆಗಳನ್ನು ಪೂರೈಸಿಕೊಳ್ಳುವ ವ್ಯವಸ್ಥೆ. ಅದೇ ರೀತಿ ಸೋಲಾರ್ ಬೀದಿ ದೀಪ ಹಾಕಿಸಿಕೊಡುವುದು.

5. ಮುಂದಿನ ಕಾರ್ಯತಂತ್ರವೇನು?

ಬೆಂಗಳೂರಿನಲ್ಲಿ ಗೋ ಸೋಲಾರ್ ಹುಟ್ಟಿದರೂ ಅದು ವಿದೇಶದಲ್ಲಿ ಬೆಳಗುತ್ತಿದೆ. ಅದರ ಬೆಳಕು ಭಾರತದಲ್ಲೂ ಪ್ರಮುಖವಾಗಿ ಉಪಯೋಗಕ್ಕೆ ಬರಬೇಕೆಂಬ ಕಾರಣಕ್ಕಾಗಿ ವ್ಯಾಪಕ ಪ್ರಚಾರ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ.ರಾಷ್ಟ್ರಪತಿ ಪ್ರತಿಭಾ ಪಾಟೀಲ್, ರಾಜ್ಯಪಾಲ ಹಂಸರಾಜ ಭಾರದ್ವಾಜ್, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಂಸದ ಅನಂತ ಕುಮಾರ್ ಸೇರಿದಂತೆ ಪ್ರಮುಖ ಗಣ್ಯರಿಗೆ ಇದರ ಬಗ್ಗೆ ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ.

2 ನೇ ಪುಟಕ್ಕೆ

· MV×àÂ« ¬ÈÛÒ¾à¶¹Áß ÔàÑ Âþ~¾ß ÑÈáÛd ÑþÈVÛW Ô Ò¥ Pt CV ÉËÉÈ«ß- ÈßßIßo~¥. B¥ß JM¥ß ÈÀÈÑ¾ß«-þ ¶¥Äß ÈáÛs¶ Ôß¥Û¥M¢, ÔÄÈá ÑÈßÑÀV Èß¥«à- ¬þs¶Ä BÈÁ OÛ×f CV ÉËÉÈáÛ«À.

ಹೇಗಾಯಿತು ಈ ಸಾಧನೆ?

ಸಮಾಜಕ್ಕೇನಾದರೂ ಮಾಡಬೇಕೆಂದು ಹೊರಟ ಸಂಘಸಂಸ್ಥೆಗಳಿಗೆ ಸೋಲಾರ್ ಉಪಕರಣಗಳನ್ನು ದಾನವಾಗಿ ನೀಡಿ ಎಂದು ಕರೆ ಕೊಟ್ಟೆವು. ಅದರ ಉಪಯೋಗವನ್ನು ಮನದಟ್ಟಾಗುವಂತೆ ತಿಳಿಸಿದೆವು. ಅದರ ಪ್ರತಿಫಲ ನಮ್ಮ ಕಣ್ಣಮುಂದಿದೆ. ರೋಟರಿ, ಲಯನ್ಸ್‌ನಂಥ ಸಂಸ್ಥೆಗಳು ನಮ್ಮ ಮನವಿಗೆ ಓಗೊಟ್ಟವು. ತಾವು ವಿತರಿಸಬೇಕೆಂದಿದ್ದ ವಸ್ತುಗಳ ಜೊತೆಗೆ ಸೋಲಾರ್ ಉಪಕರಣವನ್ನೇ ವಿತರಿಸಲು ತೀರ್ಮಾನಿಸಿ 'ಗೋ ಸೋಲಾರ್'ಗೆ ದೊಡ್ಡ ಶಕ್ತಿಯಾಗಿ ನಿಂತಿವೆ. ■

ಒಳಗೆ
2 ÑÔ 'SÛÁ'¥ @«ßºÈ
3 Èç¥À ÁàÞW ÉÈß
4 ÈáÛ}Ûsé ÈáÛ}Ûsß ÈßÆV

ವಾರಾಂತ್ಯ ವಿನಿಮಯ

46.53

ಚಿನ್ನ 10 VÛÄM.(@®ÁMf) Áß.17,230

ಬೆಳ್ಳಿ 1P.VÛÄM. Áß.28,360

ಸಿಮೆಂಟ್ 50 0.f _ÞÄ Áß.215

ಕಬ್ಬಿಣ 10.f 27.00